

# ಆನ್‌ಲೈನ್ ಶಿಷ್ಯನ ಅನ್‌ಲಿಮಿಟೆಡ್ ಅವಾಂತರ

ಸ್ವಂತ ಆಕಾರವಿಲ್ಲದೆ ಗೆದ್ದ ಪಕ್ಷದ ಆಕಾರಕ್ಕೆ ತನ್ನ ಆಕಾರವನ್ನು ಹೊಂದಿಸಿಕೊಳ್ಳುವ ರಾಜಕೀಯ ಪಕ್ಷ ಅಥವ ಸ್ವತಂತ್ರ ಅಭ್ಯರ್ಥಿಯೇ ಅಮೀಬಾ. ಬ್ಯಾಕ್ಟೀರಿಯಾ ಎಂದರೆ, ಬ್ಯಾಕ್ ಡೋರ್ ಆಫ್ ಎ ಕೆಫೆಟೇರಿಯಾ. ಇದು ಟ್ಯೂಷನ್‌ಗಾಗಿ ಸಂದರ್ಶನಕ್ಕೆ ಬಂದ ಶಿಷ್ಯ ನೀಡಿದ ಉತ್ತರಗಳು. ಸುಳಿದುಹೋಗುವ ಗಣಿತ, ವಿಜ್ಞಾನ, ಭಾಷೆ, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತೆ ಗುರು–ಶಿಷ್ಯನ ಪ್ರಶ್ನೋತ್ತರಗಳು ನಮ್ಮ ನಿಮ್ಮ ಮನಸ್ಸಿನ ಸಿಕ್ಕುಗಳನ್ನು ತಿಳಿಗೊಳಿಸುವಂತಿವೆ ಹಾಗೂ ಮುಖದ ನೆರಿಗೆಗಳನ್ನು ಸಡಿಲಿಸುವಂತಿವೆ. ಅಂದಹಾಗೆ, ನಿಮಗೊಂದು ಪ್ರಶ್ನೆ: ಹೆಸರು ಬರೆಯುವುದನ್ನು ಕಲಿತ ಮಕ್ಕಳು ಸಿಕ್ಕಸಿಕ್ಕ ಗೋಡೆ, ಕಾಗದ, ಬಟ್ಟೆಗಳ ಸೈನ್ ಮಾಡುವ ಕಲೆಗೆ ಏನೆಂದು ಹೆಸರು? ಉತ್ತರಕ್ಕಾಗಿ ಈ ಪ್ರಶ್ನೋತ್ತರ ಓದಬೇಕು.

■ **ಎನ್. ರಾಮನಾಥ್**

ಕಲೆ: ರಾಮಕೃಷ್ಣ ಸಿದ್ರಪಾಲ

ಈ ಕಾಲಕ್ಕೆ ಅನುಗುಣವಾಗಿ ಎರಡು ವಿಧದ ಗುರುಗಳಿದ್ದೇವೆ. 'ಲವ್ ಗುರು', 'ಫಿಟ್‌ನೆಸ್ ಗುರು', 'ನೇಚರೋಪತಿ ಗುರು' ಮುಂತಾದ ಮುಂದುವರಿದ ಪಂಗಡಕ್ಕೆ ಸೇರಿರುವ ಫೇಮಸ್ ಗುರುಗಳು ಒಂದು ವಿಧವಾದರೆ 'ಧಿಯೋಯೋನಃ ಪ್ರಚೋದಯಾತ್' ಎನ್ನುತ್ತಾ ಬುದ್ಧಿಗೆ ಸಾಣೆ ಹಿಡಿಸಲು ವಿಫಲಯತ್ನ ನಡೆಸುವ 'ಟುಟೋರಿಯಲ್ ಗುರು'ಗಳು ಎರಡನೆಯ ವಿಧದವರು. 'ಕೋವಿಡ ಮುಖಮೂತಿ ಕವರಂ' ಪಕ್ಷದ ಉದಯವಾದಾಗಿನಿಂದ 'ಟುಟೋರಿಯಲ್' ಪದದಲ್ಲಿ ರಿಯಲ್ ನಾಶವಾಗಿ 'ಆನ್‌ಲೈನ್ ವಿನಾ ತೃಣಮಪಿ ನ ಚಲತಿ' ಎನ್ನುವ ಪರಿಸ್ಥಿತಿ ತಲುಪಿ, ಸಂಬಳ ಸ್ಲಿಮ್ ಆಗಿ, ಗುರುವಾದ ನಾನು ಲಘು ಆಗದಿರಲು ಉಳಿದಿದ್ದ ಏಕೈಕ ಮಾರ್ಗವಾದ 'ಆನ್‌ಲೈನ್ ಪ್ರೈವೇಟ್ ಟ್ಯೂಷನ್' ಆರಂಭಿಸಿದೆ. ನನ್ನ ಮೊದಲ ಶಿಷ್ಯನೇ ಸೀನು.

'ಟು ಪ್ಲಸ್ ಟು ಎಷ್ಟೋ?' ಮೊದಲ ಪ್ರಶ್ನೆ ಎಸೆದೆ.

'ಯಾವ ಉತ್ತರ ಕೊಡಲಿ ಸಾರ್? ಗೌರ್ನ್‌ಮೆಂಟಿಗೆ ಕೊಡುವುದೋ, ಪ್ರೈವೇಟ್‌ಗೆ ಕೊಡುವುದೋ?'

'ಉತ್ತರದಲ್ಲಿ ಇಂತಹ ವಿಂಗಡಣೆಗಳೂ ಇರತ್ವೇನೋ?'

'ಸ್ವಂತಕ್ಕೊಂದು ಸರ್ಕಾರಕ್ಕೊಂದು ಲೆಕ್ಕ ತೋರಿಸ್ತೀವಲ್ಲ ಸಾರ್'.

'ಯಾರು ಹೇಳ್ಕೊಟ್ರೋ ಇದನ್ನ?'

'ನಮ್ಮಪ್ಪ ಸಾರ್. ಬ್ಯಾಂಕ್‌ನಲ್ಲಿ ಸಾಲಕ್ಕೆ ಅಪ್ಲೈ ಮಾಡಿದ್ವಿ. ಬ್ಯಾಂಕಿನವರು ಕೇಳಿದರೆ ಹತ್ತು ಸಾವಿರ ಬಾಡಿಗೆ ಬರ್‍ತಿದೆ ಅಂತ್ಹೇಳು. ಪ್ರಾಪರ್ಟಿ ಟ್ಯಾಕ್ಸ್‌ನವರು ಬಂದರೆ ಆ ಪೋರ್ಷನ್‌ನಲ್ಲೂ ನಾವೇ ಇದೀವಿ ಅಂತ್ಹೇಳು ಅಂದಿದ್ದರು'.

'ಆಹಾ! ಮಂತ್ರಿಗಳನ್ನ ಆರಿಸೋವ್ರೇ ಹೀಗಿದ್ದರೆ ಮಂತ್ರಿಗಳು ಇನ್ನು ಹೇಗಿದ್ದಾರು! ಯಥಾ ಪ್ರಜಾ ತಥಾ ಮಂತ್ರಿ. ಹಾಗೆಯೇ ಹೇಳಿದೆಯೇನು ನೀನು?'

'ಎಲ್ಬಂತು ಸಾರ್! ಅವರಿಗೆ ಇದು ಹೇಳಿದೆ, ಇವರಿಗೆ ಅದು ಹೇಳಿದೆ. ಅದಕ್ಕೇ ನಿಮ್ಹತ್ರ ಪಾಠಕ್ಕೆ ಬಂದಿದ್ದು ಇಲ್ಲವಾದರೆ ಎಲ್ಲಿಗೆ ಹೋಗ್ತಿದ್ದೆ?'

'ಯಾವುದಾದರೂ ಫೇಮಸ್ ಗುರುಗಳ ಹತ್ತಿರ ಹೋಗ್ತಿದ್ದೆ. ಈಗ ದುಡ್ಡು ಕಡಿಮೆ ಇದೆ. ನಿಮ್ಮದೋ ಚೀಪ್ ಮೆಂಟಾಲಿಟಿ...'

'ಹೋಲ್ಡಾನ್... ನನ್ನದೂ... ಚೀಪ್ ಮೆಂಟಾಲಿಟೀನಾ...?' ಕೆಂಪು ಬಟ್ಟೆ ಕಂಡ ಗೂಳಿಯಂತೆ ಹೂಂಕರಿಸಿದೆ.

'ಅಂದರೆ ದುಡ್ಡು ಕಡಿಮೆ ತೊಗೊಳ್ಳೋ ಬುದ್ಧಿ ಅಂತ ಅರ್ಥ ಸಾರ್... ಕಾಸ್ಟ್ಲಿ ಮೆಂಟಾಲಿಟಿ, ಚೀಪ್ ಮೆಂಟಾಲಿಟಿ ಅಂತ ಟೂ ಟೈಪ್ಸ್ ಆಫ್ ಮೆಂಟಾಲಿಟಿ ಇರತ್ತೆ ಸಾರ್'. ಶಿಷ್ಯನೇ ಕೆಲವು ಕ್ಷಣಗಳ ಕಾಲ ಗುರುವಿನ ಪಾತ್ರ ವಹಿಸಿದ್ದ.

'ಟು ಪ್ಲಸ್ ಟೂಗೆ ಉತ್ತರ ಹೇಳು' – ಗುರುವಿನ ರೇಂಕಾರವಿತ್ತು ದನಿಯಲ್ಲಿ.

'ಖಾಸಗಿ ಉತ್ತರ ನಾಲ್ಕು, ಫ್ಯಾಮಿಲಿ ಪ್ಲಾನಿಂಗ್ ಪ್ರಕಾರ ಆರು'.

'ಹೇಗೆ?'

'ನಾವಿಬ್ಬರು, ನಮಗೊಂದು ಮಗು ಅಂದರೆ ಮೂರಾಗತ್ತಲ್ಲ